ಕಣಕಣ್ಣ ಚಕಮಕಿ ಇತ್ತ
        ಕುಡಿಗಣ್ಣಿನತ್ತ
        ತಾಕಿ ಹಾರಿತ್ತ
    ಗಾಳಿ ಸವಾರಿಗ್ಹೊರಟಿತು ಚಿತ್ತ ॥ ಹೂತಽದ

ಅಗೊ ಗಾಳಿ ಧೂಳಿಯಾ ಬಂಬಾ
        ನಿಂತಾಂಗ ಆದ ಖಂಬಾ
        ಅಲ್ಲಿ ರೌದಿ ತುಂಬಾ
    ಗಣಿ ಕುಣಿಧಾಂಗ ಡೊಂಬರ ರಂಭಾ ॥ ಹೂತಽದ

ವ್ಯಾಲೆ ಅಲ್ಲಿ ಪಾರಿವಾಳ ಜೋಡಿ
        ಒಂದಕ್ಕೊಂದ ನೋಡಿ
        ಬಿಸಿಲ ತೆರೆ ದೂಡಿ
    ಹಾರ್ತ್ಽದ ನೀಲಿಮುಗಿಲ್ಹೊಕ್ಕಡಿ ॥ ಹೂತಽದ

ಕಂಡಂಗಾತು ನೀರಿನ ಕೊಳ
        ನೀಲಿ ಮುಗಿಲ ಜಳಾ
        ಎಂಥ ಝುಳ ಝುಳಾ
    ಮುಳುಮುಳುಗಿ ಹೋತು ಮನದ ಧೂಳಾ॥ ಹೂತಽದ

ಕಾಲ ಹೋಗತಿತ್ತ ಹಿಂದ ಸರಿದು
        ಮನಸು ಆತ ಬರಿದು
        ಮಧ್ಯಾನ್ ಬ್ಯಾಸರ ಮುರಿದು
    ಬಿಸಿಲ ತಾನಽಹೋಗತಿತ್ತ ಹರಿದು ॥ ಹೂತಽದ

ಕವಿ ಜೀವದ ಬ್ಯಾಸರ ಹರಿಸಾಕ
        ಹಾಡ ನುಡಿಸಾಕ
        ಹೆಚ್ಚಿಗೇನು ಬೇಕ ?
    ಒಂದು ಹೂತ ಹುಣಿಸಿಮರ ಸಾಕ ॥ ಹೂತಽದ

ಬೆಳಕಿನ ಕೆಚ್ಚನು ಕತ್ತಲೆಯು ಕಿಚ್ಚನು
ಮುಂಗಡದ ಗವಿಯಲ್ಲಿ ನೆರೆ ಕಂಡೆವು
ಹುಚ್ಚಾಗಿ ಸಕ್ಕೆವು ಸಚ್ಚಿಗೆ ಸಿಕ್ಕೆವು
ನೆಚ್ಚಿಗೆಯಾತರದಿದೆ? ಎಂದೆವು
ಕೋಪದ ತಾಪದ ಪಾಪದ ಶಾಪದ
ಶ್ವಾಪದಗಳಿಗಂಜಿ ಒಳಹೂತೆವು
ಸೂತೆವು ಯಾವಾವ ಆಸೆಯು, ನೇಯುದ
ನೂಲಿಗೆ ಜೋತೆವು ಮನಸೋತೆವು.

ಮಾರನೆ ಬೆಳಗಿಗೆ ಕೃತಯುಗ ಬಂತೇನೊ
ಎಂತೇನೋ ಎನುವಂತೆ ಕುಣಿದಾಡುತ
ಹಾಡನು ಕಟ್ಟಲು ಏಕನಾದವ ಹಿಡಿಯೆ
ಪ್ರಳಯಮೇಘದ ದಾಳಿ ಮೇಲೇರುತ
ಝುಂಝಾಮಾರುತ ಸಾರುತ ಹಾರುತ
ನೆಲಸಮಮಾಡಿತು ತೋಟವನು
ಕಿಡಿಗೇಡಿ ದೈವವು ಸಮ್ಮೊಡನಾಡಿತು
ಯಾಕೇನೊ ಸಖಿ, ಹುಡುಗಾಟವನು.

ಗಾಣಿಗಗೆ ಸಿಟ್ಟಾಗಿ ಒಣರೊಟ್ಟಿ ತಿಂದಂತೆ
ಅಸಮಾಧಾನಕೆ, ರಸವಿಂಗಿಸಿ
ಹಾದಿಯ ದೆವ್ವವ ಮನೆಯೊಳಗೆ ಕರೆದಂತೆ
ಒಬ್ಬರನೊಬ್ಬರು ಮುಖ ಭಂಗಿಸಿ
ಕೆಣಕಾಡಿ ಅಣಕಕೆ ಕಾದಾಡಿ ತೇದಾಡಿ
ತಸುಮನ ಮನೆಗಳ ಕುಂದಿಸಿರೆ
ನನಗೂ ನಿನಗೂ ಅಂಟಿದ ನಂಟಿನ
ಕೊನೆ ಬಲ್ಲವರಾರು ಕಾಮಾಕ್ಷಿಯೇ!

